ಬರೆದಿದ್ದು ಸಾಹಿತ್ಯವೇ ಅಲ್ಲ ಎಂದು ಫರ್ಮಾನು ಹೊರಡಿಸಿದ ಕಾಲವಾಗಿತ್ತದು. ತಾನು ಸಾಹಿತ್ಯದ ವಿದ್ಯಾರ್ಥಿಯಲ್ಲವೆಂದು ಅವಮಾನಿಸುವ ಒಂದು ಬಳಗವೇ ಕನ್ನಡ ಸಾಹಿತ್ಯ ಲೋಕದಲ್ಲಿದೆ ಎಂದು ಅವರಿಗೆ ಗೊತ್ತಿದ್ದರೂ, ಆ ಮಾತುಗಳನ್ನು ತಲೆಯ ಮೇಲಿಂದಲೇ ಹಾರಿಸಿ ಬರವಣಿಗೆ ಮುಂದುವರೆಸಿದ ದಿಟ್ಟೆ ಸಾರಾ.

ಚಳ್ಳಕೆರೆಯಲ್ಲಿ ಒಮ್ಮೆ ನಡೆದ ಸಮಾರಂಭ



ಒಂದರಲ್ಲಿ ಪ್ರಸಿದ್ಧ ಸಾಹಿತಿಯೊಬ್ಬರು ಸಾರಾ ಹೇಳಿದ ತಲಾಖ್ ಸಮಸ್ಯೆಗಳು ನಮ್ಮ ಮುಸ್ಲಿಂ ಸಮಾಜದಲ್ಲಿ ಇಲ್ಲವೇ ಇಲ್ಲವೆಂದು ಸಭೆಯಲ್ಲಿ ಖಂಡಿಸಿ ಮಾತನಾಡಿದರು. ತಕ್ಷಣ ಸಾರಾ ಅಲ್ಲೇ ಎದ್ದು ನಿಂತು, ಅವರಿಗೆ ಉದಾಹರಣೆಗಳ ಸಹಿತ ಅವರದೇ ಊರಿನ ಘಟನೆಗಳ ಪಟ್ಟಿಯನ್ನು ಮುಂದಿಟ್ಟರು. ಖಂಡಿಸಿದ ಭಾಷಣಕಾರರು ಸುಮ್ಮನಾಗದೆ ನಿರ್ವಾಹವಿರಲಿಲ್ಲ. ಆ ಸಭೆಯಲ್ಲಿ ನಾನು ಇದ್ದೆ. ಈ ವಾದವು, ವಿವಾದ–ವಾಗ್ವಾದಗಳಾಗಿ ಪರಿಣಮಿಸುತ್ತದೇನೊ ಎಂದು ಹೆದರಿದ್ದೆ. ಪುಣ್ಯಕ್ಕೆ ಹಾಗಾಗಲಿಲ್ಲ. ಸಾರಾ ಆಡುವ ಪ್ರತೀ ಮಾತುಗಳಿಗೆ ಮುನ್ನ ಸಾಕಷ್ಟು ಕ್ಷೇತ್ರಾಧ್ಯಯನ ಮಾಡುತ್ತಿದ್ದರು.

ದೂರದೂರಿನ ಹಲವು ಸಮಾರಂಭಗಳಿಗೆ ನಾವು ಜೊತೆಯಾಗಿ ಹೋಗುತ್ತಿದ್ದ ಕಾಲದಲ್ಲಿ ನನ್ನ ಮಾನಸಿಕ ಒತ್ತಡಗಳಿಗೆ ಅವರು, ಅವರ ಮಾನಸಿಕ ಒತ್ತಡಗಳಿಗೆ ನಾನು ಕಿವಿಯಾಗಿ ಸಾಂತ್ವನ ಮಾಡಿಕೊಳ್ಳುತ್ತಿದ್ದೆವು. ಪುತ್ತೂರಿನ ಸಮಾರಂಭವೊಂದರಲ್ಲಿ ಅವರ ಮೇಲೆ ಸ್ವಜಾತಿ ಬಾಂಧವರು ಕುರ್ಚಿ ಎಸೆದು ದಾಳಿ ಮಾಡಿದಾಗ ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ. ವಿವೇಕ ರೈ ಅವರು ಅಡ್ಡ ನಿಂತು ರಕ್ಷಿಸಿದ್ದನ್ನು ಸದಾ ಸ್ಮರಿಸುತ್ತಿದ್ದರು ಸಾರಾ. 'ನನ್ನ ಬೆನ್ನ ಹಿಂದೆ ಮೂರು ಕೋಟಿ ಕನ್ನಡ ಸೋದರರು ಇದ್ದುದರಿಂದಲೇ ನಾನು ಬಂಡಾಯದ ಧ್ವನಿ ಎತ್ತಲು ಸಾಧ್ಯವಾಯಿತು' ಎನ್ನುತ್ತಿದ್ದರು. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಹೊಸ ಮುಸ್ಲಿಂ ಸಂವೇದನೆಯನ್ನು ನೀಡಿದ ಸಾರಾ ಅವರನ್ನು ಕನ್ನಡಿಗರು ಮೇಲೆತ್ತಿ ಕೊಂಡಾಡಿದರು, ಪ್ರಶಸ್ತಿ ನೀಡಿ ಗೌರವಿಸಿದರು, ಸನ್ಮಾನಿಸಿದರು. 'ಯಾಕೆ ಅವರಿಗೇ ಪ್ರಶಸ್ತಿ' ಎಂದು ಕುರುಬುವವರೂ ಆಗ ಇದ್ದರು. 'ಆ ಸಮಯದಲ್ಲಿ ನನ್ನಲ್ಲಿ ಒಂದು ರೀತಿಯ ಕೀಳರಿಮೆ ಕಾಡುತ್ತಿತ್ತು; ಮರುಕ್ಷಣವೇ ಇನ್ನಷ್ಟು ಸ್ಫೂರ್ತಿಯಿಂದ ಬರೆಯುವ ಮತ್ತು ಸಂಘಟನೆಯಲ್ಲಿ ತೊಡಗಿಸಿಕೊಳ್ಳುವ ಕೆಲಸ ಮಾಡತೊಡಗಿದೆ' ಎಂದು ಸಾರಾ ನನ್ನಲ್ಲಿ ಹೇಳಿಕೊಂಡಿದ್ದರು. ಅವರು ಇಷ್ಟೆಲ್ಲಾ ಸಾಧನೆ ಮಾಡಿದ್ದು ಮದುವೆಯಾಗಿ, ನಾಲ್ಕು ಗಂಡು ಮಕ್ಕಳ ತಾಯಿಯಾಗಿ, ಮಧ್ಯ ವಯಸ್ಸು ದಾಟಿದ ಮೇಲೆಯೇ ಎಂಬುದು ವಿಶೇಷ.

ಗಂಡ ಅಬೂಬಕ್ಕರ್ ಸುಶಿಕ್ಷಿತರು, ಸರ್ಕಾರಿ ಉದ್ಯೋಗಿ. ಆದರೆ, ಸಾಹಿತ್ಯದ ಬಗ್ಗೆ ಅಭಿರುಚಿಯಿಲ್ಲ. ಹೆಣ್ಣು ಮಕ್ಕಳು ಪತ್ರಿಕೆ ಓದುವುದೇ ನಿಷಿದ್ಧವಾಗಿದ್ದ ಮನೆಯದು. ತನ್ನ ಕುಟುಂಬದೊಳಗೇ ಪರಿವರ್ತನೆಯನ್ನುಂಟು ಮಾಡಲು ಸಣ್ಣಸಣ್ಣ ರೀತಿಯಲ್ಲಿ ಬಂಡಾಯ ಪ್ರವೃತ್ತಿಯನ್ನು ಪ್ರದರ್ಶಿಸುವ ಧೈರ್ಯ ತೋರಿದ ಸಾರಾ ಮುಂದೆ ಪತ್ರಿಕೆಗಳಿಗೆ ಬರೆಯುತ್ತಾ, ಸಂಘಟನೆಗಳಲ್ಲಿ ತೊಡಗಿಸಿಕೊಂಡು